ಮೂವತ್ತು ದಿವಸಗಳ ಸದರಿ ಅವಧಿಯು ಮುಗಿದ ನಂತರ ಐತೀರ್ಪು ಜಾರಿಯಾಗತಕ್ಕದ್ದಲ್ಲವೆಂದು ಘೋಷಿಸಬಹುದು.

(2) (1)ನೇ ಉಪಪ್ರಕರಣದ ಪರಂತುಕದ ಅಡಿಯಲ್ಲಿ, ಐತೀರ್ಪಿನ ಸಂಬಂಧದಲ್ಲಿ ಯಾವುದೇ ಘೋಷಣೆಯನ್ನು ಮಾಡಿರುವಲ್ಲಿ, ಸಮುಚಿತ ಸರ್ಕಾರ ಅಥವಾ ಕೇಂದ್ರ ಸರ್ಕಾರವು, 17ನೇ ಪ್ರಕರಣದ ಅಡಿಯಲ್ಲಿ ಐತೀರ್ಪನ್ನು ಪ್ರಕಟಿಸಿದ ದಿನಾಂಕದಿಂದ ತೊಂಬತ್ತು ದಿವಸಗಳೊಳಗೆ, ಆ ಐತೀರ್ಪು ತಿರಸ್ಕರಿಸುವ ಅಥವಾ ಮಾರ್ಪಾಟು ಮಾಡುವ ಆದೇಶವನ್ನು ಮಾಡಬಹುದು ಮತ್ತು ಲಭ್ಯವಾಗುವ ಮೊದಲ ಅವಕಾಶದಲ್ಲಿ, ಆ ಐತೀರ್ಪನ್ನು ಆದೇಶ ಪ್ರತಿಯ ಜೊತೆಯಲ್ಲಿ, ಆದೇಶವನ್ನು ರಾಜ್ಯ ಸರ್ಕಾರವು ಮಾಡಿದ್ದರೆ ವಿಧಾನ ಮಂಡಲದ ಮುಂದೆ ಅಥವಾ ಆದೇಶವನ್ನು ಕೇಂದ್ರ ಸರ್ಕಾರವು ಮಾಡಿದ್ದರೆ ಸಂಸತ್ತಿನ ಮುಂದೆ ಇಡತಕ್ಕದ್ದು.

(3) (2)ನೇ ಉಪಪ್ರಕರಣದ ಅಡಿಯಲ್ಲಿ ಮಾಡಿದ ಆದೇಶದ ಮೂಲಕ ತಿರಸ್ಕರಿಸಲಾದಂತೆ ಅಥವಾ ಮಾರ್ಪಾಟುಗೊಳಿಸಲಾದಂತೆ ಯಾವುದೇ ಐತೀರ್ಪನ್ನು ರಾಜ್ಯದ ವಿಧಾನ ಮಂಡಲದ ಮುಂದೆ ಅಥವಾ ಸಂಸತ್ತಿನ ಮುಂದೆ ಮಂಡಿಸಿರುವಲ್ಲಿ, ಅಂಥ ಐತೀರ್ಪು ಅದನ್ನು ಹಾಗೆ ಮಂಡಿಸಿದ ದಿನಾಂಕದಿಂದ ಹದಿನೈದು ದಿನಗಳು ಮುಗಿದ ನಂತರ ಜಾರಿಯಾಗತಕ್ಕದ್ದು ಮತ್ತು (1)ನೇ ಉಪಪ್ರಕರಣದ ಪರಂತುಕದ ಅಡಿಯಲ್ಲಿನ ಘೋಷಣೆಯ ಅನುಸರಣೆಯಲ್ಲಿ (2)ನೆ ಉಪಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು ಮಾಡದಿದ್ದರೆ, ಆ ಐತೀರ್ಪು, (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ತೊಂಬತ್ತು ದಿನಗಳು ಮುಗಿದ ಮೇಲೆ ಜಾರಿಯಾಗತಕ್ಕದ್ದು.

(4) ಐತೀರ್ಪನ್ನು ಜಾರಿಗೊಳಿಸುವ ಬಗೆಗಿನ (1)ನೇ ಉಪಪ್ರಕರಣದ ಮತ್ತು (3)ನೇ ಉಪ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಐತೀರ್ಪು ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುತಕ್ಕದ್ದು, ಆದರೆ ಹಾಗೆ ಯಾವುದೇ ದಿನಾಂಕವನ್ನು ನಿರ್ದಿಷ್ಟಪಡಿಸದಿದ್ದರೆ, ಆ ಐತೀರ್ಪು, ಸಂದರ್ಭಾನುಸಾರವಾಗಿ (1)ನೇ ಉಪಪ್ರಕರಣ ಅಥವಾ (3)ನೇ ಉಪಪ್ರಕರಣದ ಅಡಿಯಲ್ಲಿ ಜಾರಿಯಾಗುವ ದಿನಾಂಕದಂದು ಪ್ರವರ್ತನೆಗೆ ಬರತಕ್ಕದ್ದು.

xx xx xx

5700 (6401) ಶ್ರೀ ಆರಗ ಜ್ಞಾನೇಂದ್ರ(ತೀರ್ಥಹಳ್ಳಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮಲೆನಾಡಿನ ಭಾಗದಲ್ಲಿ ವಿಶೇಷತ: ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಸಂಚರಿಸುವ ಅನೇಕ ಖಾಸಗೀ ಬಸ್ಸುಗಳು ಮಳೆ ಗಾಲದಲ್ಲಿ ಅನೇಕ ಮಾರ್ಗಗಳಲ್ಲಿ ಸಂಚಾರ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ಏತನೀರಾವರಿ ಸಂಚಾರ ನಿಲ್ಲಿಸಿರುವುದರಿಂದ ಶಾಲಾ ಕಾಲೇಜುಗಳಿಗೆ ಹೋಗುವ ಗ್ರಾಮೀಣ ವಿದ್ಯಾರ್ಥಿಗಳಿಗೆ ತೊಂದರೆ ಯಾಗಿರುವುದು ನಿಜವೇ;

ಇ) ಈ ಬಗ್ಗೆ ವಿಚಾರಣೆ ನಡೆಸಿ ಬಸ್ ಮಾಲೀಕರ ಮೇಲೆ ಕ್ರಮ ಕೈಗೊಳ್ಳಲಾಗುವುದೇ;

ಈ) ಬಸ್ ರದ್ದುಪಡಿಸುವುದು ಮಾರ್ಗ ಬದಲಾಯಿಸುವುದು ಇತ್ಯಾದಿ ಪ್ರಕರಣಗಳ ನಿಗಾ ಇಡಲು ಸಾರಿಗೆ ಇಲಾಖೆಯವರು ಮೇಲ್ವಿಚಾರಣೆ ನಡೆಸುವ ಕ್ರಮ ಇದೆಯೇ:

ಉ) ಹೌದಾದಲ್ಲಿ, ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಕಳೆದ ಮೂರು ಸಾಲುಗಳಿಂದ ಇಂತಹ ಎಷ್ಟು ತಪಾಸಣೆ ನಡೆಸಲಾಗಿದೆ;

ಊ) ನಿಯಮ ಉಲ್ಲಂಘನೆ ಕಂಡು ಬಂದ ಪ್ರಕರಣಗಳು ಎಷ್ಟು ಹಾಗೂ ಏನು ಕ್ರಮ ಕೈಗೊಳ್ಳಲಾಗಿದೆ:

(ಪ್ರಕರಣವಾರು ವಿವರ ನೀಡುವುದು);

ಶ್ರೀ ಮಲ್ಲಿಕಾರ್ಜುನ ಖರ್ಗೆ, ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು.

ಅ) ಕೇವಲ ಒಂದು ಮಜಲು ವಾಹನವನ್ನು ಮಾತ್ರ ದುರಸ್ತಿ ಉದ್ದೇಶಕ್ಕೆ ಅನುಪಯೋಗಗೊಳಿಸಿದ್ದು ದಾಖಲೆಗಳನ್ನು ಸಂಬಂಧಿಸಿದ ಶಿವಮೊಗ್ಗ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಅಧ್ಯರ್ಪಣ ಮಾಡಿರುವ ಕಾರಣ ನಿಲುಗಡೆಯಾಗಿರುವುದು ಗಮನಕ್ಕೆ ಬಂದಿದೆ.

ಆ) ಅಂತಹ ಯಾವ ಪ್ರಕರಣವು ವರದಿಯಾಗಿಲ್ಲ.

ಇ) ರಹದಾರಿ ನಿಯಮ ಉಲ್ಲಂಘಿಸಿ ಸಂಚಾರ ನಡೆಸುವುದು ಕಂಡು ಬಂದಲ್ಲಿ ಅಂತಹ ವಾಹನ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಈ) ಹೌದು.

ಉ) ಕಳೆದ ಮೂರು ಸಾಲುಗಳಲ್ಲಿ 6 ಪರವಾನಿಗೆ ಪಡೆದು ಸೇವೆಯನ್ನು ನೀಡದ 6 ಪ್ರಕರಣಗಳಲ್ಲಿ ಪರವಾನಗಿಯನ್ನು ರದ್ದುಪಡಿಸಲಾಗಿದೆ.

ಊ) ಶಿವಮೊಗ್ಗ ಸಾರಿಗೆ ಪ್ರಾಧಿಕಾರವು 6 ಪ್ರಕರಣಗಳಲ್ಲಿ ರಹದಾರಿಗಳನ್ನು ರದ್ದುಪಡಿಸಿದ ವಿವರಗಳು ಈ ಕೆಳಗಿನಂತಿದೆ.

ಕ್ರ. ಸಂ.	ರಹದಾರಿ ಸಂಖ್ಯೆ	ಮಾರ್ಗ
1.	34/0102	ಮಲ್ಲಕ್ಕಿ – ತೀರ್ಥಹಳ್ಳಿ
2.	01/9495	ಹೆದ್ದೂರು – ಕೊಪ್ಪ
3.	47/9798	ಕೊಣಂದೂರು ಶಿವಮೊಗ್ಗ
4.	07/0001	ಚಕ್ರನಾಗರ – ತೀರ್ಥಹಳ್ಳಿ
5.	25/9797	ಬುಕ್ಕಡಿಬೈಲ್ ಶಿವಮೊಗ್ಗ
6.	26/9900	ತೀರ್ಥಹಳ್ಳಿ ಹೆದ್ದೂರು

5701 (640) ಶ್ರೀ ಆರಗ ಜ್ಞಾನೇಂದ್ರ(ತೀರ್ಥಹಳ್ಳಿ) : ಮಾನ್ಯ ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಣ್ಣ ಉಳಿತಾಯ ಯೋಜನೆಯಡಿ ಸಂಗ್ರಹವಾದ ಹಣ ಎಷ್ಟು :